ಧಾರ್ಮಿಕ ಸಾಮರಸ್ಯದ ಚಿಂತಕ – ದಾರಾ ಶಿಕೋಹ

ಬಸೀರಾಬಾನು ನಿಡಗುಂದಿ*

DOI: https://doi.org/10.5281/zenodo.23890427

ABSTRACT

ದಾರಾ ಶಿಕೋಹ ಭಾರತೀಯ ಇತಿಹಾಸದಲ್ಲಿ ಧಾರ್ಮಿಕ ಸಾಮರಸ್ಯ, ಸಹಿಷ್ಣುತೆ ಮತ್ತು ಆಧ್ಯಾತ್ಮಿಕ ಚಿಂತಕರಾಗಿ ಗುರುತಿಸಿಕೊಂಡಿದ್ದಾರೆ. ಇಸ್ಲಾಮಿನ ಸೂಫಿ ಪರಂಪರೆ ಹಾಗೂ ಹಿಂದೂ ಧರ್ಮದ ತಾತ್ವಿಕ ಚಿಂತನೆಗಳ ನಡುವೆ ಸಾಮ್ಯತೆಯನ್ನು ಗುರುತಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ವಿವಿಧ ಧರ್ಮಗಳ ಮೂಲತತ್ವಗಳನ್ನು ಅರಿತುಕೊಳ್ಳುವ ಮೂಲಕ ಮಾನವೀಯ ಏಕತೆಯನ್ನು ಸಾಧಿಸಬಹುದು ಎಂಬ ನಂಬಿಕೆ ಅವರದಾಗಿತ್ತು. ಉಪನಿಷತ್ತುಗಳನ್ನು ಪರ್ಷಿಯನ್ ಭಾಷೆಗೆ ಅನುವಾದಿಸುವ ಮೂಲಕ ಭಾರತೀಯ ತಾತ್ವಿಕ ಚಿಂತನೆಗಳನ್ನು ಇತರ ಭಾಷಿಕರಿಗೂ ಪರಿಚಯಿಸಿದರು. ಧರ್ಮಗಳ ಬಾಹ್ಯ ಆಚರಣೆಗಳಿಗಿಂತ ಅವುಗಳ ಆಂತರಿಕ ಆಧ್ಯಾತ್ಮಿಕ ಮೌಲ್ಯಗಳಿಗೆ ಹೆಚ್ಚಿನ ಮಹತ್ವ ನೀಡಿದರು. ಅವರ ಚಿಂತನೆಗಳು ಧಾರ್ಮಿಕ ಸಹಬಾಳ್ವೆ, ಪರಸ್ಪರ ಗೌರವ ಮತ್ತು ಸಾಮರಸ್ಯದ ಮಹತ್ವವನ್ನು ಸಾರುತ್ತವೆ. ಇಂದಿನ ಬಹುಧರ್ಮೀಯ ಸಮಾಜದಲ್ಲಿಯೂ ದಾರಾ ಶಿಕೋಹ ವಿಚಾರಗಳು ಪ್ರಸ್ತುತವಾಗಿವೆ. ಧರ್ಮಗಳ ನಡುವಿನ ಭಿನ್ನತೆಗಳಿಗಿಂತ ಸಾಮಾನ್ಯ ಮಾನವೀಯ ಮೌಲ್ಯಗಳನ್ನು ಗುರುತಿಸುವುದು ಅವರ ಚಿಂತನೆಯ ವೈಶಿಷ್ಟ್ಯವಾಗಿದೆ.

KEYWORDS: ದಾರಾ ಶಿಕೋಹ, ಸೂಫಿ ಪರಂಪರೆ, ಉಪನಿಷತ್ತು, ವೇದ, ಧ್ಯಾನ, ತತ್ವಶಾಸ್ತ್ರ, ಸಿರ್ರ್-ಇ-ಅಕ್ಬರ್, ಮಜ್ಮಾ-ಉಲ್-ಬಹ್ರೈನ್.

* **ಡಾ. ಬಸೀರಾಬಾನು ನಿಡಗುಂದಿ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇರಕಲ್ಲಗಡ.

ಭಾರತದ ಇತಿಹಾಸವು ವಿವಿಧ ಧರ್ಮಗಳ, ಸಂಸ್ಕೃತಿಗಳ ಮತ್ತು ತಾತ್ವಿಕ ಪರಂಪರೆಗಳ ಸಂಗಮವಾಗಿದೆ. ಈ ನೆಲದಲ್ಲಿ ಹಿಂದೂ, ಬೌದ್ಧ, ಜೈನ, ಸಿಖ್ ಮತ್ತು ಇಸ್ಲಾಂ ಧರ್ಮಗಳು ಪರಸ್ಪರ ಪ್ರಭಾವ ಬೀರುತ್ತಾ ಸಮನ್ವಯದ ಸಂಸ್ಕೃತಿಯನ್ನು ಬೆಳೆಸಿವೆ. ಮಧ್ಯಕಾಲೀನ ಭಾರತದಲ್ಲಿ ವಿಶೇಷವಾಗಿ ಮೊಘಲರ ಆಳ್ವಿಕೆಯ ಸಂದರ್ಭದಲ್ಲಿ ಧಾರ್ಮಿಕ ಸಹಿಷ್ಣುತೆ, ಸಾಂಸ್ಕೃತಿಕ ವಿನಿಮಯ ಮತ್ತು ತಾತ್ವಿಕ ಸಂವಾದಕ್ಕೆ ಹೊಸ ಆಯಾಮಗಳು ದೊರೆತವು. ಈ ಹಿನ್ನೆಲೆಯಲ್ಲಿ ಮೊಘಲ್ ದೊರೆ ದಾರಾ ಶಿಕೋಹರ ವ್ಯಕ್ತಿತ್ವವು ಅತ್ಯಂತ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ದಾರಾ ಶಿಕೋಹ ಕೇವಲ ಮೊಘಲ್ ರಾಜಕುಮಾರನಷ್ಟೇ ಅಲ್ಲ; ಸೂಫಿ ಚಿಂತಕ, ಧರ್ಮಸಮನ್ವಯವಾದಿ, ತತ್ವಜ್ಞಾನಿ, ಸಾಹಿತ್ಯಾಸಕ್ತ ಮತ್ತು ಭಾರತೀಯ ಜ್ಞಾನಪರಂಪರೆಯ ಮಹಾನ್ ಅಭಿಮಾನಿಯಾಗಿದ್ದರು. ಇಸ್ಲಾಮಿನ ಸೂಫಿ ಚಿಂತನೆ ಮತ್ತು ಭಾರತೀಯ ವೇದಾಂತ ತತ್ವಗಳ ನಡುವೆ ಅಂತರವಿಲ್ಲ, ಎರಡೂ ಪರಮಸತ್ಯವನ್ನು ಅರಸುವ ಮಾರ್ಗಗಳಾಗಿವೆ ಎಂಬುದು ಅವರ ದೃಢವಾದ ನಿಲುವಾಗಿತ್ತು. ಈ ಕಾರಣದಿಂದ ಹಿಂದೂ ಧರ್ಮಗ್ರಂಥಗಳು, ವಿಶೇಷವಾಗಿ ಉಪನಿಷತ್ತು, ಯೋಗ ಮತ್ತು ವೇದ, ತತ್ವಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿದರು. ದಾರಾ ಶಿಕೋಹರ ಚಿಂತನೆಯ ಪ್ರಮುಖ ಲಕ್ಷಣವೆಂದರೆ ಧರ್ಮಗಳ ನಡುವೆ ಗೋಡೆಗಳನ್ನು ನಿರ್ಮಿಸುವುದಲ್ಲ, ಅವುಗಳಲ್ಲಿರುವ ಸಾಮಾನ್ಯ ಆಧ್ಯಾತ್ಮಿಕ ಸತ್ಯವನ್ನು ಹುಡುಕುವುದು. ಇದೇ ಕಾರಣದಿಂದ ಅವರು ಕಾಶಿಯ (ಬನಾರಸ) ಪಂಡಿತರ ಸಹಕಾರದಿಂದ ಅನೇಕ ಉಪನಿಷತ್ತುಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರ ಮಾಡಿದರು. ಈ ಭಾಷಾಂತರವು ಭಾರತೀಯ ತತ್ವಶಾಸ್ತ್ರವನ್ನು ಪಶ್ಚಿಮ ಏಷ್ಯಾ ಮತ್ತು ಯುರೋಪಿನ ವಿದ್ವಾಂಸರಿಗೆ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಇಂದಿನ ಜಾಗತಿಕ ಸಂದರ್ಭದಲ್ಲಿ ಧಾರ್ಮಿಕ ಅಸಹಿಷ್ಣುತೆ ಮತ್ತು ಸಾಮಾಜಿಕ ಸಂಘರ್ಷಗಳು ಹೆಚ್ಚುತ್ತಿರುವಾಗ, ದಾರಾ ಶಿಕೋಹರ ಸಮನ್ವಯದ ದೃಷ್ಟಿಕೋನವು ಮತ್ತೊಮ್ಮೆ ಪ್ರಸ್ತುತವಾಗುತ್ತದೆ. ಅವರ ಜೀವನ ಮತ್ತು ಕೃತಿಗಳು ಪರಸ್ಪರ ಗೌರವ ಮತ್ತು ಸಹಬಾಳ್ವೆಯ ಮೌಲ್ಯಗಳನ್ನು ಸಾರುತ್ತವೆ.

ದಾರಾ ಶಿಕೋಹರ ಚಿಂತನೆಯ ಮೂಲ ಆಧಾರ ಸೂಫಿ ಪರಂಪರೆ. ಸೂಫಿಸಂ (ತಸವ್ವುಫ್) ಇಸ್ಲಾಮಿನ ಆಧ್ಯಾತ್ಮಿಕ ಆಯಾಮವಾಗಿದ್ದು, ದೇವರನ್ನು ಬಾಹ್ಯ ಆಚರಣೆಗಳ ಮೂಲಕವಲ್ಲ, ಆಂತರಿಕ ಅನುಭವದ ಮೂಲಕ ಅರಿಯಬಹುದು ಎಂಬ ನಂಬಿಕೆಯನ್ನು ಪ್ರತಿಪಾದಿಸುತ್ತದೆ. ಸೂಫಿಗಳ ಪ್ರಕಾರ ಪ್ರೀತಿ, ಭಕ್ತಿ, ಆತ್ಮಶುದ್ಧಿ, ಸೇವೆ, ಧ್ಯಾನ ಮತ್ತು ದೇವರ ನಿರಂತರ ಸ್ಮರಣೆ ಮಾನವನನ್ನು ಪರಮಸತ್ಯದತ್ತ ಕೊಂಡೊಯ್ಯುತ್ತದೆ. ಸೂಫಿ ಪರಂಪರೆಯ ಪ್ರಮುಖ ಪಂಥಗಳಾದ ಚಿಶ್ತಿ, ಕಾದಿರಿ, ಸುಹ್ರವರ್ದಿ ಮತ್ತು ನಕ್ಷ್‌ಬಂದಿ ಸಂಪ್ರದಾಯಗಳು ಭಾರತದ ಸಾಂಸ್ಕೃತಿಕ ಜೀವನದ ಮೇಲೆ ಆಳವಾದ ಪ್ರಭಾವ ಬೀರಿವೆ. ಸೂಫಿ ತತ್ವದಲ್ಲಿ ಅತ್ಯಂತ ಮಹತ್ವದ ಪರಿಕಲ್ಪನೆಯಾದ ವಹ್ದತ್ ಅಲ್–ವುಜೂದ್ (Wahdat al–Wujud) ಅನ್ನು ಮಹಾನ್ ಸೂಫಿ ತತ್ವಜ್ಞಾನಿ ಇಬ್ನು ಅರಬಿ ಪ್ರತಿಪಾದಿಸಿದರು. ಇದರ ಅರ್ಥ

"ಅಸ್ತಿತ್ವದ ಏಕತ್ವ". ವಿಶ್ವದಲ್ಲಿರುವ ಸಮಸ್ತ ಸೃಷ್ಟಿಯೂ ಒಂದೇ ಪರಮಸತ್ಯದ ಅಭಿವ್ಯಕ್ತಿಯಾಗಿದೆ. ಈ ವಿಚಾರವು ದಾರಾ ಶಿಕೋಹರನ್ನು ಭಾರತೀಯ ವೇದಾಂತದತ್ತ ಆಕರ್ಷಿಸಿತು.

ಜನನ ಮತ್ತು ಬಾಲ್ಯ:

ದಾರಾ ಶಿಕೋಹ ಕ್ರಿ.ಶ. 1615ರ ಮಾರ್ಚ್ 20 ರಂದು ರಾಜಸ್ಥಾನದ ಅಜ್ಮೇರ್‌ನಲ್ಲಿ ಜನಿಸಿದರು. ಮೊಘಲ್ ಸಾಮ್ರಾಟ ಶಾಹಜಹಾನ್ ಮತ್ತು ಮುಮ್ತಾಜ್ ಬೇಗಂ ದಂಪತಿಯ ಹಿರಿಯ ಪುತ್ರರಾಗಿದ್ದರು. ಅರಮನೆಯ ವೈಭವದಲ್ಲಿ ಬೆಳೆದರೂ, ಬಾಲ್ಯದಿಂದಲೇ ಆಧ್ಯಾತ್ಮಿಕ ವಿಚಾರಗಳ ಬಗ್ಗೆ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಅವರ ಶಿಕ್ಷಣದಲ್ಲಿ ಪರ್ಷಿಯನ್, ಅರೇಬಿಕ್, ಇಸ್ಲಾಮಿಕ್ ಧರ್ಮಶಾಸ್ತ್ರ, ಇತಿಹಾಸ, ಸಾಹಿತ್ಯ, ತರ್ಕಶಾಸ್ತ್ರ ಮತ್ತು ತತ್ವಶಾಸ್ತ್ರ ಪ್ರಮುಖವಾಗಿದ್ದವು. ರಾಜಕೀಯ ಮತ್ತು ಯುದ್ಧಕಲೆಯ ಜೊತೆಗೆ ಧಾರ್ಮಿಕ ಹಾಗೂ ತಾತ್ವಿಕ ಅಧ್ಯಯನಕ್ಕೂ ಸಮಾನ ಪ್ರಾಮುಖ್ಯತೆ ನೀಡಿದರು. ಈ ಶಿಕ್ಷಣವೇ ಅವರನ್ನು ವಿಶಾಲ ಮನೋಭಾವದ ಚಿಂತಕರನ್ನಾಗಿ ರೂಪಿಸಿತು. ದಾರಾ ಶಿಕೋಹರ ವ್ಯಕ್ತಿತ್ವದ ಮೇಲೆ ಸೂಫಿ ಪರಂಪರೆಯ ಪ್ರಭಾವ ಅಪಾರವಾಗಿತ್ತು. ವಿಶೇಷವಾಗಿ ಕಾದಿರಿ ಸೂಫಿ ಸಂಪ್ರದಾಯದ ಸಂತ ಮಿಯಾನ್ ಮಿರ್ ಮತ್ತು ಅವರ ಉತ್ತರಾಧಿಕಾರಿ ಮುಲ್ಲಾ ಶಾಹ್ ಬದಕ್ಷಿ ಅವರಿಂದ ಆಧ್ಯಾತ್ಮಿಕ ಮಾರ್ಗದರ್ಶನ ಪಡೆದರು. ಸೂಫಿ ಚಿಂತನೆಯ ಪ್ರಕಾರ ದೇವರು ಒಬ್ಬನೇ; ಅವನನ್ನು ತಲುಪುವ ಮಾರ್ಗಗಳು ಅನೇಕ. ಪ್ರೀತಿ, ಕರುಣೆ, ಮಾನವಸೇವೆ ಮತ್ತು ಆತ್ಮಸಾಕ್ಷಾತ್ಕಾರವೇ ಆಧ್ಯಾತ್ಮಿಕ ಜೀವನದ ಕೇಂದ್ರಬಿಂದುಗಳಾಗಿವೆ. ದಾರಾ ಶಿಕೋಹ ಈ ತತ್ವವನ್ನು ಸ್ವೀಕರಿಸಿ, ಭಾರತೀಯ ವೇದಾಂತ ಪರಂಪರೆಗಳಲ್ಲಿಯೂ ಇದೇ ರೀತಿಯ ಆಧ್ಯಾತ್ಮಿಕ ಸತ್ಯ ಅಡಕವಾಗಿದೆ ಎಂದು ನಂಬಿದರು. ಧರ್ಮವನ್ನು ಕೇವಲ ಆಚರಣೆಗಳ ಸಮೂಹವೆಂದು ನೋಡದೆ, ಸತ್ಯದ ಅನ್ವೇಷಣೆಯ ಮಾರ್ಗವೆಂದು ಅರ್ಥೈಸಿದರು. ಈ ದೃಷ್ಟಿಕೋನವೇ ಅವರನ್ನು ಭಾರತೀಯ ಜ್ಞಾನಪರಂಪರೆಯತ್ತ ಆಕರ್ಷಿಸಿತು.

ದಾರಾ ಶಿಕೋಹರಿಗೆ ಭಾರತೀಯ ತತ್ವಶಾಸ್ತ್ರದ ಬಗ್ಗೆ ಆಳವಾದ ಕುತೂಹಲವಿತ್ತು. ವೇದ, ಉಪನಿಷತ್ತು, ಭಗವದ್ಗೀತೆ, ಯೋಗ ಮತ್ತು ತತ್ವಗಳ ಅಧ್ಯಯನಕ್ಕಾಗಿ ಅನೇಕ ಪಂಡಿತರನ್ನು ಭೇಟಿಯಾದರು. ಪರ್ಷಿಯನ್, ಅರೆಬಿಕ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಭುತ್ವ ಪಡೆದಿದ್ದರು. ಕಾಶಿ, ಲಾಹೋರ್ ಮತ್ತು ಇತರ ಜ್ಞಾನಕೇಂದ್ರಗಳಲ್ಲಿ ಸಂಸ್ಕೃತ ಪಂಡಿತರೊಂದಿಗೆ ನಿರಂತರ ಸಂವಾದ ನಡೆಸಿದರು. ಅವರ ಉದ್ದೇಶ ಹಿಂದೂ ಧರ್ಮವನ್ನು ಸ್ವೀಕರಿಸುವುದಲ್ಲ; ಬದಲಾಗಿ ಭಾರತೀಯ ತಾತ್ವಿಕ ಪರಂಪರೆಯಲ್ಲಿರುವ ವಿಶ್ವಮಾನವೀಯ ಆಧ್ಯಾತ್ಮಿಕ ಸತ್ಯವನ್ನು ಅರಿಯುವುದಾಗಿತ್ತು. ವಿಶೇಷವಾಗಿ ಉಪನಿಷತ್ತುಗಳಲ್ಲಿರುವ ಬ್ರಹ್ಮ, ಆತ್ಮ, ಜ್ಞಾನ ಮತ್ತು ಮೋಕ್ಷದ ಪರಿಕಲ್ಪನೆಗಳನ್ನು ಸೂಫಿ ಚಿಂತನೆಯೊಂದಿಗೆ ಹೋಲಿಕೆ ಮಾಡುವುದಾಗಿತ್ತು.

ಶಾಹಜಹಾನ್ ಆಳ್ವಿಕೆಯಲ್ಲಿ ಮೊಘಲ್ ಸಾಮ್ರಾಜ್ಯ ರಾಜಕೀಯವಾಗಿ ಬಲಿಷ್ಠವಾಗಿತ್ತು. ಅರಮನೆಗಳಲ್ಲಿ ಪರ್ಷಿಯನ್ ಸಾಹಿತ್ಯ, ಚಿತ್ರಕಲೆ, ಸಂಗೀತ, ವಾಸ್ತುಶಿಲ್ಪ ಮತ್ತು ತತ್ವಚಿಂತನೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿತ್ತು. ಈ ಸಾಂಸ್ಕೃತಿಕ ವಾತಾವರಣದಲ್ಲಿ ದಾರಾ ಶಿಕೋಹ ಅವರಿಗೆ ವಿವಿಧ ಧರ್ಮಗಳ ಮತ್ತು ಸಂಸ್ಕೃತಿಗಳ ವಿದ್ವಾಂಸರನ್ನು ಭೇಟಿಯಾಗುವ ಅವಕಾಶ ದೊರೆಯಿತು. ಹಿಂದೂ ಪಂಡಿತರು, ಜೈನ ಮುನಿಗಳು, ಸೂಫಿ ಸಂತರು, ಹೊಸ ಒಡಂಬಡಿಕೆ (The New Testament) ಹಾಗೂ ಇತರ ಧಾರ್ಮಿಕ ಚಿಂತಕರೊಂದಿಗೆ ಸಂವಾದ ನಡೆಸುತ್ತಿದ್ದರು. ಇದರಿಂದ ಅವರ ಚಿಂತನೆ ಮತ್ತಷ್ಟು ವಿಶಾಲವಾಯಿತು. ದಾರಾ ಶಿಕೋಹರ ಪ್ರಕಾರ ಧರ್ಮಗಳು ವಿಭಿನ್ನವಾಗಿರಬಹುದು; ಆದರೆ ಅವುಗಳ ಅಂತಿಮ ಗುರಿ ಒಂದೇ – ಪರಮಸತ್ಯದ ಅನುಭವ. ಇಸ್ಲಾಂ ಮತ್ತು ಹಿಂದೂ ಧರ್ಮಗಳ ನಡುವೆ ವಿರೋಧವನ್ನು ಕಾಣದೆ, ಅವುಗಳಲ್ಲಿರುವ ಸಾಮ್ಯತೆಯನ್ನು ಗುರುತಿಸಲು ಪ್ರಯತ್ನಿಸಿದರು. ಅವರ ದೃಷ್ಟಿಯಲ್ಲಿ ಧಾರ್ಮಿಕ ಸಹಿಷ್ಣುತೆ ಎಂದರೆ ಕೇವಲ ಇತರ ಧರ್ಮಗಳನ್ನು ಸಹಿಸುವುದು ಅಲ್ಲ; ಅವುಗಳಲ್ಲಿರುವ ಜ್ಞಾನವನ್ನು ಗೌರವದಿಂದ ಅಧ್ಯಯನ ಮಾಡುವುದು. ಈ ಕಾರಣದಿಂದಲೇ ಅವರು ಹಿಂದೂ ಧರ್ಮಗ್ರಂಥಗಳನ್ನು ಅಧ್ಯಯನ ಮಾಡಿ, ಪರ್ಷಿಯನ್ ಭಾಷೆಯ ಮೂಲಕ ವಿಶಾಲ ಓದುಗರಿಗೆ ಪರಿಚಯಿಸಿದರು.

ಸಿರ್ರ್–ಇ–ಅಕ್ಬರ್ ಮತ್ತು ಮಜ್ಮಾ–ಉಲ್–ಬಹ್ರೈನ್:

ದಾರಾ ಶಿಕೋಹರ ಅತ್ಯಂತ ಮಹತ್ವದ ಸಾಧನೆಗಳಲ್ಲಿ ಉಪನಿಷತ್ತುಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಿದ್ದು. ಈ ಪ್ರಯತ್ನವು ಕೇವಲ ಒಂದು ಭಾಷಾಂತರ ಕಾರ್ಯವಾಗಿರಲಿಲ್ಲ; ಅದು ಭಾರತೀಯ ಮತ್ತು ಇಸ್ಲಾಮಿಕ್ ಜ್ಞಾನಪರಂಪರೆಗಳ ನಡುವೆ ಸಂವಾದವನ್ನು ನಿರ್ಮಿಸುವ ಸಾಂಸ್ಕೃತಿಕ ಹಾಗೂ ತಾತ್ವಿಕ ಸೇತುವೆಯಾಗಿತ್ತು. ಅವರ ನಂಬಿಕೆಯ ಪ್ರಕಾರ, ವಿವಿಧ ಧರ್ಮಗಳ ಪವಿತ್ರ ಗ್ರಂಥಗಳು ಅಂತಿಮವಾಗಿ ಒಂದೇ ಪರಮಸತ್ಯವನ್ನು ಪ್ರತಿಪಾದಿಸುತ್ತವೆ. ಈ ದೃಷ್ಟಿಕೋನದಿಂದಲೇ ಉಪನಿಷತ್ತುಗಳ ಅಧ್ಯಯನಕ್ಕೆ ಮುಂದಾದರು. ವೇದಗಳ ಅಂತಿಮ ಭಾಗವಾಗಿರುವ ಉಪನಿಷತ್ತುಗಳು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ಕೃತಿಗಳೆಂದು ಪರಿಗಣಿಸಲಾಗುತ್ತದೆ. ಬ್ರಹ್ಮ, ಆತ್ಮ, ಜ್ಞಾನ, ಮೋಕ್ಷ ಮತ್ತು ಸೃಷ್ಟಿಯ ಮೂಲತತ್ವಗಳ ಕುರಿತು ಅವು ಆಳವಾದ ಚಿಂತನೆಗಳನ್ನು ಒಳಗೊಂಡಿವೆ.

ಸಿರ್ರ್–ಇ–ಅಕ್ಬರ್ – ಉಪನಿಷತ್ತುಗಳ ಪರ್ಷಿಯನ್ ಭಾಷಾಂತರ ಕೃತಿ. ಕ್ರಿ.ಶ. 1657ರ ಸುಮಾರಿಗೆ ದಾರಾ ಶಿಕೋಹ ಸುಮಾರು ಐವತ್ತಕ್ಕೂ ಹೆಚ್ಚು ಉಪನಿಷತ್ತುಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಿ ಅವುಗಳಿಗೆ "ಸಿರ್ರ್–ಇ–ಅಕ್ಬರ್" (ಮಹಾ ರಹಸ್ಯ) ಎಂಬ ಹೆಸರನ್ನು ನೀಡಿದರು.

ಭಾಷಾಂತರದ ಉದ್ದೇಶ:

- ಭಾರತೀಯ ತತ್ವಶಾಸ್ತ್ರವನ್ನು ಪರ್ಷಿಯನ್ ಭಾಷಿಕರಿಗೆ ಪರಿಚಯಿಸುವುದು.

- ಸೂಫಿ ಮತ್ತು ವೇದಾಂತ ಪರಂಪರೆಗಳ ನಡುವಿನ ಸಾಮ್ಯತೆಗಳನ್ನು ತೋರಿಸುವುದು.
- ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಪರಸ್ಪರ ಗೌರವ ಮತ್ತು ಅರಿವನ್ನು ಬೆಳೆಸುವುದು.
- ಧಾರ್ಮಿಕ ಗ್ರಂಥಗಳನ್ನು ಪರಸ್ಪರ ವಿರೋಧಿಗಳಂತೆ ನೋಡುವ ಬದಲು ಅವುಗಳಲ್ಲಿ ಅಡಗಿರುವ ಆಧ್ಯಾತ್ಮಿಕ ಸತ್ಯವನ್ನು ಗುರುತಿಸುವುದು.

ದಾರಾ ಶಿಕೋಹರ ಪರ್ಷಿಯನ್ ಭಾಷಾಂತರ ಕೃತಿಯು ಯುರೋಪಿನ ವಿದ್ವಾಂಸರ ಗಮನ ಸೆಳೆಯಿತು. 18ನೇ ಶತಮಾನದಲ್ಲಿ ಫ್ರೆಂಚ್ ವಿದ್ವಾಂಸ ಅಂಕ್ವೆಟಿಲ್-ಡ್ಯುಪೆರೊನ್ ಅವರು 'ಸಿರ್-ಇ-ಅಕ್ಬರ್' ಆಧರಿಸಿ ಉಪನಿಷತ್ತುಗಳನ್ನು ಲ್ಯಾಟಿನ್ ಭಾಷೆಗೆ ಅನುವಾದಿಸಿದರು. ಈ ಲ್ಯಾಟಿನ್ ಆವೃತ್ತಿಯ ಮೂಲಕ ಯುರೋಪಿನ ತತ್ವಜ್ಞಾನಿಗಳಿಗೆ ಭಾರತೀಯ ವೇದಾಂತ ಪರಿಚಯವಾಯಿತು. ಜರ್ಮನ್ ತತ್ವಜ್ಞಾನಿ ಆರ್ಥರ್ ಶೊಪೆನ್ಹಾವರ್ ಅವರು ಉಪನಿಷತ್ತುಗಳ ಮಹತ್ವವನ್ನು ಮೆಚ್ಚಿ, ಅವು ತಮ್ಮ ತಾತ್ವಿಕ ಚಿಂತನೆಗೆ ಆಳವಾದ ಪ್ರೇರಣೆ ನೀಡಿವೆ ಎಂದು ಉಲ್ಲೇಖಿಸಿದ್ದಾರೆ. ಹೀಗಾಗಿ ದಾರಾ ಶಿಕೋಹರ ಭಾಷಾಂತರ ಕಾರ್ಯವು ಭಾರತೀಯ ಜ್ಞಾನವನ್ನು ಜಾಗತಿಕ ಮಟ್ಟಕ್ಕೆ ತಲುಪಿಸುವಲ್ಲಿ ಐತಿಹಾಸಿಕ ಪಾತ್ರ ವಹಿಸಿತು. ಈ ಭಾಷಾಂತರ ಕಾರ್ಯವು ಕೇವಲ ಸಾಹಿತ್ಯಿಕ ಸಾಧನೆಯಲ್ಲ; ಅದು ಧರ್ಮಗಳ ನಡುವಿನ ಸಂವಾದಕ್ಕೆ ಹೊಸ ದಿಕ್ಕನ್ನು ನೀಡಿದ ಮಹತ್ವದ ಸಾಂಸ್ಕೃತಿಕ ಯೋಜನೆಯಾಗಿತ್ತು. ಅವರ ಕೃತಿಗಳು ಭಾರತೀಯ ಮತ್ತು ಇಸ್ಲಾಮಿಕ್ ಜ್ಞಾನಪರಂಪರೆಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಿದವು. ಅವುಗಳ ಮೂಲಕ ಭಾರತೀಯ ತತ್ವಶಾಸ್ತ್ರವು ಪಶ್ಚಿಮ ಏಷ್ಯಾ ಮತ್ತು ಯುರೋಪಿನ ಚಿಂತಕರಿಗೂ ತಲುಪಿತು.

"ಮಜ್ಮಾ-ಉಲ್-ಬಹ್ರೈನ್" (ಎರಡು ಸಮುದ್ರಗಳ ಸಂಗಮ) – ಸೂಫಿ ಮತ್ತು ಹಿಂದೂ ಎರಡು ಧರ್ಮಗಳ ಮಹಾ ಸಮುದ್ರಗಳ ಮಿಲನದ ಸಂದೇಶ ಈ ಕೃತಿಯಲ್ಲಿ ಕಾಣಬಹುದು. ಹಿಂದೂ ತತ್ವ ಮತ್ತು ಸೂಫಿ ತತ್ವದ ಸಾಮ್ಯತೆಗಳನ್ನು ಹೀಗೆ ಗುರುತಿಸಿದ್ದಾರೆ:

- ದೇವರು ಒಬ್ಬನೇ; ಹೆಸರುಗಳು ಮಾತ್ರ ವಿಭಿನ್ನ.
- ಆತ್ಮದ ಶುದ್ಧೀಕರಣವೇ ಮೋಕ್ಷ ಅಥವಾ ದೇವರ ಸಾನ್ನಿಧ್ಯಕ್ಕೆ ದಾರಿ.
- ಬಾಹ್ಯ ಆಚರಣೆಗಳಿಗಿಂತ ಆಂತರಿಕ ಅನುಭವಕ್ಕೆ ಹೆಚ್ಚಿನ ಮಹತ್ವ.
- ಗುರು ಅಥವಾ ಆಧ್ಯಾತ್ಮಿಕ ಮಾರ್ಗದರ್ಶಿಯ ಅಗತ್ಯ.
- ಪ್ರೀತಿ, ಕರುಣೆ ಮತ್ತು ಸತ್ಯವೇ ಆಧ್ಯಾತ್ಮಿಕ ಜೀವನದ ಆಧಾರ.
- ಧಾರ್ಮಿಕ ಸಮನ್ವಯದ ಚಿಂತನೆ.

ಸೂಫಿ ತತ್ವ	ಹಿಂದೂ ತತ್ವ
ತೌಹೀದ್– ದೇವರ ಏಕತ್ವ	ಬ್ರಹ್ಮವೇ ಪರಮಸತ್ಯ
ವಹ್ದತ್ ಅಲ್–ವುಜೂದ್	ಅದ್ವೈತ ಏಕತ್ವ
ಫನಾ	ಮೋಕ್ಷ
ಬಕಾ	ಜೀವನ್ಮುಕ್ತಿ
ಜಿಕ್ರ್	ಧ್ಯಾನ
ಮುರಾಕಬಾ	ಸಮಾಧಿ
ಪೀರ್	ಗುರು
ರೂಹ್	ಆತ್ಮ

ಈ ಹೋಲಿಕೆಗಳನ್ನು ಯಾವುದೇ ಧರ್ಮವನ್ನು ಮತ್ತೊಂದರಲ್ಲಿ ಲೀನಗೊಳಿಸುವ ಉದ್ದೇಶದಿಂದ ಮಾಡಲಿಲ್ಲ. ವಿಭಿನ್ನ ಧರ್ಮಗಳು ಒಂದೇ ಸತ್ಯವನ್ನು ವಿವಿಧ ಭಾಷೆಗಳಲ್ಲಿ ಅಭಿವ್ಯಕ್ತಿಸುತ್ತವೆ ಎಂಬುದನ್ನು ತೋರಿಸುವುದೇ ಅವರ ಆಶಯವಾಗಿತ್ತು. ಈ ಹೋಲಿಕೆಗಳ ಮೂಲಕ ಧರ್ಮಗಳ ಮೂಲಭೂತ ಗುರಿ ಆತ್ಮಸಾಕ್ಷಾತ್ಕಾರ ಮತ್ತು ಪರಮಸತ್ಯದ ಅನುಭವವೇ ಎಂಬುದನ್ನು ಅವರು ಪ್ರತಿಪಾದಿಸಿದರು. ಮೊಘಲರ ಆಳ್ವಿಕೆಯ ಸಂದರ್ಭದಲ್ಲಿ ಧಾರ್ಮಿಕ ಭಿನ್ನಾಭಿಪ್ರಾಯಗಳು ಮತ್ತು ರಾಜಕೀಯ ಸಂಘರ್ಷಗಳು ಅಸ್ತಿತ್ವದಲ್ಲಿದ್ದವು. ಇಂತಹ ಸಂದರ್ಭದಲ್ಲಿ ಹಿಂದೂ ಮತ್ತು ಮುಸ್ಲಿಂ ಧಾರ್ಮಿಕ ಪರಂಪರೆಗಳ ನಡುವೆ ಸೌಹಾರ್ದವನ್ನು ಬೆಳೆಸುವ ಪ್ರಯತ್ನ ಮಾಡಿದ್ದು ಅವರ ಚಿಂತನೆಯ ವಿಶೇಷವಾಗಿದೆ. ಒಂದು ಧರ್ಮದ ಅನುಯಾಯಿಗಳು ಮತ್ತೊಂದು ಧರ್ಮದ ತತ್ವಗಳನ್ನು ಅಧ್ಯಯನ ಮಾಡುವುದರಿಂದ ಪರಸ್ಪರ ನಂಬಿಕೆಗಳನ್ನು ಅರ್ಥಮಾಡಿಕೊಳ್ಳಬಹುದು ಎಂಬ ನಿಲುವನ್ನು ಅವರು ಬೆಂಬಲಿಸಿದರು. ಅವರ ದೃಷ್ಟಿಯಲ್ಲಿ ಧಾರ್ಮಿಕ ಭಿನ್ನತೆಗಳು ಪರಸ್ಪರ ದ್ವೇಷಕ್ಕೆ ಕಾರಣವಾಗಬಾರದು. ಬದಲಾಗಿ, ಅವುಗಳ ನಡುವಿನ ಸಾಮ್ಯತೆಗಳನ್ನು ಅರಿಯುವ ಮೂಲಕ ಸಹಬಾಳ್ವೆ ಮತ್ತು ಪರಸ್ಪರ ಗೌರವವನ್ನು ಬೆಳೆಸಬೇಕು. ಈ ಕಾರಣದಿಂದ ಮಜ್ಮಾ–ಉಲ್–ಬಹ್ರೈನ್ ಕೃತಿಯನ್ನು ಭಾರತದಲ್ಲಿ ಅಂತರ್–ಧಾರ್ಮಿಕ ಸಂವಾದದ ಪ್ರಮುಖ ಐತಿಹಾಸಿಕ ಪ್ರಯತ್ನಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ.

ಸಿರ್–ಇ–ಅಕ್ಬರ್ ಮತ್ತು ಮಜ್ಮಾ–ಉಲ್–ಬಹ್ರೈನ್ ಕೃತಿಗಳು ದಾರಾ ಶಿಕೋಹರ ಉದಾರ ಮನೋಭಾವ, ತಾತ್ವಿಕ ಆಳ ಮತ್ತು ಧರ್ಮಸಮನ್ವಯದ ದೃಷ್ಟಿಯನ್ನು ಪ್ರತಿಬಿಂಬಿಸುವ ಅಪೂರ್ವ ಕೃತಿಗಳಾಗಿವೆ. ಉಪನಿಷತ್ತುಗಳ ಪರ್ಷಿಯನ್ ಭಾಷಾಂತರದ ಮೂಲಕ ಭಾರತೀಯ ಜ್ಞಾನಪರಂಪರೆಯನ್ನು ವಿಶ್ವದ ವಿವಿಧ ಭಾಗಗಳಿಗೆ ಪರಿಚಯಿಸಿದರು. ಧರ್ಮಗಳ ನಡುವೆ ಸಂವಾದ, ಪರಸ್ಪರ

ಗೌರವ ಮತ್ತು ಆಧ್ಯಾತ್ಮಿಕ ಏಕತೆಯನ್ನು ಪ್ರತಿಪಾದಿಸಿದ ಕಾರ್ಯವು ಇಂದಿಗೂ ವಿಶ್ವಮಾನವೀಯ ಮೌಲ್ಯಗಳನ್ನು ನೆನಪಿಸುತ್ತದೆ. ಈ ಕಾರಣದಿಂದ ದಾರಾ ಶಿಕೋಹರನ್ನು ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಧರ್ಮಗಳ ನಡುವಿನ ಸೇತುವೆ ನಿರ್ಮಿಸಿದ ಮಹಾನ್ ಚಿಂತಕರಾಗಿ ಸ್ಮರಿಸಲಾಗುತ್ತದೆ. ದಾರಾ ಶಿಕೋಹ ತಮ್ಮ ಬೆರಳ ಉಂಗುರದಲ್ಲಿ 'ಪ್ರಭೂ' ಎಂದು ಬರೆಯಿಸಿ ಅದನ್ನು ಧರಿಸುತ್ತಿದ್ದರು. ಎರಡೂ ಧರ್ಮಗಳ ಮೂಲ ಒಂದೇ ಎಂಬ ಅವರ ನಿಲುವು ಸ್ಪಷ್ಟವಾಗಿತ್ತು.

ದಾರಾ ಶಿಕೋಹ ಕೇವಲ ಸಿರ್-ಇ-ಅಕ್ಬರ್ ಮತ್ತು ಮಜ್ಮಾ-ಉಲ್-ಬಹ್ರೈನ್ ಕೃತಿಗಳ ಲೇಖಕರಷ್ಟೇ ಅಲ್ಲ. ಅವರು ಅನೇಕ ಸೂಫಿ ಗ್ರಂಥಗಳನ್ನು ರಚಿಸಿದ್ದಾರೆ.

ಪ್ರಮುಖ ಕೃತಿಗಳು:

- ಸಫೀನತ್-ಉಲ್-ಔಲಿಯಾ – ಸೂಫಿ ಸಂತರ ಜೀವನಚರಿತ್ರೆ.
- ಸಕೀನತ್-ಉಲ್-ಔಲಿಯಾ – ಕಾದಿರಿ ಸೂಫಿ ಪರಂಪರೆಯ ವಿವರಣೆ.
- ರಿಸಾಲಾ-ಇ-ಹಕ್ ನುಮಾ – ಆಧ್ಯಾತ್ಮಿಕ ಮಾರ್ಗದರ್ಶನ.
- ಹಸನಾತ್-ಉಲ್-ಆರಿಫೀನ್ – ಸೂಫಿ ಮಹಾತ್ಮರ ಉಕ್ತಿಗಳ ಸಂಗ್ರಹ.
- ತಾರೀಕತ್-ಉಲ್-ಹಕೀಕತ್ – ಸೂಫಿ ಸಾಧನೆಯ ವಿವರಣೆ.
- ಇಕ್ಸೀರ್-ಇ-ಆಝಮ್ – ಇದು ಕಾವ್ಯಗಳನ್ನು ಒಳಗೊಂಡಿದೆ.

ಈ ಕೃತಿಗಳು ಅವರ ಆಳವಾದ ಆಧ್ಯಾತ್ಮಿಕ ಅಧ್ಯಯನ ಮತ್ತು ವಿಶಾಲ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ.

ರಾಜಕೀಯ ಸಂಘರ್ಷ ಮತ್ತು ಮರಣ:

ದಾರಾ ಶಿಕೋಹ ಮೊಘಲ್ ಸಾಮ್ರಾಜ್ಯದ ಉತ್ತರಾಧಿಕಾರಿಯಾಗುವ ಎಲ್ಲ ಅರ್ಹತೆಗಳನ್ನು ಹೊಂದಿದ್ದರು. ಜ್ಞಾನ, ಸಾಹಿತ್ಯ, ತತ್ವಶಾಸ್ತ್ರ ಮತ್ತು ಧಾರ್ಮಿಕ ಸಹಿಷ್ಣುತೆಯ ಪ್ರತೀಕವಾಗಿದ್ದರು. ಆದರೆ ಅವರ ಜೀವನವು ರಾಜಕೀಯ ಸಂಘರ್ಷ, ಧಾರ್ಮಿಕ ಭಿನ್ನಾಭಿಪ್ರಾಯ ಮತ್ತು ಅಧಿಕಾರದ ಪೈಪೋಟಿಯ ಕಾರಣದಿಂದ ದುರಂತ ಅಂತ್ಯ ಕಂಡಿತು.

1657ರಲ್ಲಿ ಮೊಘಲ್ ಚಕ್ರವರ್ತಿ ಶಾಹಜಹಾನ್ ಅನಾರೋಗ್ಯಕ್ಕೆ ಒಳಗಾದ ನಂತರ, ಪುತ್ರರ ನಡುವೆ ಸಿಂಹಾಸನಕ್ಕಾಗಿ ಯುದ್ಧ ಆರಂಭವಾಯಿತು. ದಾರಾ ಶಿಕೋಹ, ಔರಂಗಜೇಬ, ಶುಜಾ ಮತ್ತು ಮುರಾದ್ ಬಕ್ಷ್ ಪರಸ್ಪರ ಅಧಿಕಾರಕ್ಕಾಗಿ ಹೋರಾಡಿದರು. ಶಾಹಜಹಾನ್‌ರಿಗೆ ದಾರಾ ಶಿಕೋಹರ ಮೇಲೆಯೇ ಹೆಚ್ಚಿನ ವಿಶ್ವಾಸವಿದ್ದ ಕಾರಣ, ಅವರನ್ನು ಉತ್ತರಾಧಿಕಾರಿಯೆಂದು ಪರಿಗಣಿಸಲಾಗುತ್ತಿತ್ತು. ಆದರೆ ದಾರಾ ಶಿಕೋಹ ಯುದ್ಧತಂತ್ರದಲ್ಲಿ ಔರಂಗಜೇಬನಷ್ಟು ಪ್ರಬಲರಾಗಿರಲಿಲ್ಲ. 1658ರ ಸಮುಗಢ ಯುದ್ಧದಲ್ಲಿ ಔರಂಗಜೇಬ ದಾರಾ ಶಿಕೋಹರನ್ನು ಸೋಲಿಸಿದನು.

ಈ ಸೋಲು ಮೊಘಲ್ ಇತಿಹಾಸದಲ್ಲಿ ನಿರ್ಣಾಯಕ ತಿರುವಾಯಿತು. ಸಮುಗಢ ಯುದ್ಧದ ನಂತರ ದಾರಾ ಶಿಕೋಹ ಆಗ್ರಾ ಬಿಟ್ಟು ಲಾಹೋರ್, ಮುಲ್ತಾನ್, ಭಕ್ಕರ್, ಗುಜರಾತ್ ಮತ್ತು ಕಛ್ ಮುಂತಾದ ಪ್ರದೇಶಗಳಿಗೆ ತೆರಳಿ ಬೆಂಬಲ ಪಡೆಯಲು ಪ್ರಯತ್ನಿಸಿದರು. ಇದೇ ಸಂದರ್ಭದಲ್ಲಿ ಅವರ ಪ್ರೀತಿಯ ಹೆಂಡತಿ ನಾದಿರಾ ಬೇಗಂ ಸಹ ತೀರಿಕೊಂಡಳು. ಕೊನೆಗೆ ಅವರ ಬೆಂಬಲಿಗನೇ ಬಹದೂರ್ ಖಾನ್ ಎಂಬಾತ ಮೋಸದಿಂದ ಅವರನ್ನು ಬಂಧಿಸಿ ಕ್ರಿ.ಶ. 1659ರಲ್ಲಿ ಔರಂಗಜೇಬನ ಸಮ್ಮುಖಕ್ಕೆ ಕರೆತಂದನು. ಅವರ ವಿರುದ್ಧ ಧಾರ್ಮಿಕ ಆರೋಪಗಳನ್ನೂ ಹೊರಿಸಲಾಯಿತು. ಹಿಂದೂ ಧರ್ಮಗ್ರಂಥಗಳನ್ನು ಅಧ್ಯಯನ ಮಾಡಿರುವುದು ಮತ್ತು ಸೂಫಿ–ವೇದಾಂತ ಸಮನ್ವಯದ ವಿಚಾರಗಳನ್ನು ಪ್ರತಿಪಾದಿಸಿರುವುದು ಸಂಪ್ರದಾಯವಾದಿ ವಲಯಗಳಲ್ಲಿ ಅನುಮಾನಕ್ಕೆ ಕಾರಣವಾಯಿತು. 1659 ಸೆಪ್ಟೆಂಬರ್ 7 ಬುಧವಾರದಂದು ದಾರಾ ಶಿಕೋಹರಿಗೆ ಮರಣದಂಡನೆ ವಿಧಿಸಲಾಯಿತು. ಆಗ ಅವರಿಗೆ ಕೇವಲ 44 ವರ್ಷ ವಯಸ್ಸು. ಅವರ ಮರಣವು ಕೇವಲ ಒಬ್ಬ ರಾಜಕುಮಾರನ ಅಂತ್ಯವಲ್ಲ; ಧಾರ್ಮಿಕ ಸಂವಾದ ಮತ್ತು ಸಾಂಸ್ಕೃತಿಕ ಸಮನ್ವಯದ ಪ್ರಮುಖ ಧಾರೆಯ ಮೇಲಾದ ಹೊಡೆತವಾಗಿಯೂ ಪರಿಗಣಿಸಲಾಗುತ್ತದೆ.

ಆಧುನಿಕ ಇತಿಹಾಸಕಾರರು ದಾರಾ ಶಿಕೋಹರ ಬಗ್ಗೆ ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಅವರನ್ನು ಭಾರತದ ಧರ್ಮಸಾಮರಸ್ಯದ ಪ್ರತೀಕವೆಂದು ಕೊಂಡಾಡುತ್ತಾರೆ. ಇನ್ನೂ ಕೆಲವರು ಅವರ ತಾತ್ವಿಕ ಸಮನ್ವಯದ ಪ್ರಯತ್ನವು ಸೂಫಿ ದೃಷ್ಟಿಕೋನದಿಂದ ವೇದಾಂತವನ್ನು ಅರ್ಥೈಸಿದ ಪ್ರಯತ್ನವಾಗಿತ್ತು ಎಂದು ವಿಶ್ಲೇಷಿಸುತ್ತಾರೆ. ಆದಾಗ್ಯೂ, ಹೆಚ್ಚಿನ ಸಂಶೋಧಕರು ಒಂದು ವಿಷಯದಲ್ಲಿ ಒಪ್ಪುತ್ತಾರೆ—ದಾರಾ ಶಿಕೋಹ ವಿಭಿನ್ನ ಧರ್ಮಗಳ ನಡುವೆ ಸಾಮರಸ್ಯವನ್ನು ಬೆಳೆಸಿದ ಅಪರೂಪದ ಚಿಂತಕರಾಗಿದ್ದರು.

ಉಪಸಂಹಾರ:

ದಾರಾ ಶಿಕೋಹ ಭಾರತೀಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ರಾಜಕೀಯ ಅಧಿಕಾರಕ್ಕಿಂತ ಜ್ಞಾನ, ಆಧ್ಯಾತ್ಮಿಕತೆ ಮತ್ತು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಸಿರ್ರ್–ಇ–ಅಕ್ಬರ್ ಮತ್ತು ಮಜ್ಮಾ–ಉಲ್–ಬಹ್ರೈನ್ ಕೃತಿಗಳು ಧರ್ಮಗಳ ನಡುವಿನ ತಾತ್ವಿಕ ಅಂಶಗಳನ್ನು ಗುರುತಿಸುವ ಅಪೂರ್ವ ಪ್ರಯತ್ನಗಳಾಗಿವೆ. ದಾರಾ ಶಿಕೋಹ ವೇದಾಂತ ಮತ್ತು ಉಪನಿಷತ್ತುಗಳನ್ನು ಆಳವಾಗಿ ಅಧ್ಯಯನ ಮಾಡಿ ಅವುಗಳನ್ನು ಸೂಫಿ ಚಿಂತನೆಯೊಂದಿಗೆ ಹೋಲಿಕೆ ಮಾಡಿದರು ಎಂಬುದೇ ಹೆಚ್ಚು ದೃಢವಾದ ನಿರ್ಣಯವಾಗಿದೆ. ಈ ಕಾರಣದಿಂದ ದಾರಾ ಶಿಕೋಹರನ್ನು ಧಾರ್ಮಿಕ ಸಹಿಷ್ಣುತೆ, ಜ್ಞಾನಪರತೆ ಮತ್ತು ಸಾಂಸ್ಕೃತಿಕ ಸಮನ್ವಯದ ಪ್ರತೀಕವಾಗಿ ಸ್ಮರಿಸಲಾಗುತ್ತದೆ.

ದಾರಾ ಶಿಕೋಹರ ಜೀವನವು ಅಧಿಕಾರದ ಇತಿಹಾಸಕ್ಕಿಂತ ಆಲೋಚನೆಗಳ ಇತಿಹಾಸದಲ್ಲಿ ಹೆಚ್ಚು ಮಹತ್ವ ಪಡೆದಿದೆ. ಅವರು ಧರ್ಮಗಳ ನಡುವೆ ಗೋಡೆಗಳನ್ನು

ಕಟ್ಟಲಿಲ್ಲ; ಸೇತುವೆಗಳನ್ನು ನಿರ್ಮಿಸಿದರು. ಸೂಫಿ ಆಧ್ಯಾತ್ಮಿಕತೆ, ವೇದಾಂತ ಮತ್ತು ಉಪನಿಷತ್ತುಗಳನ್ನು ಪರಸ್ಪರ ಸಂವಾದಕ್ಕೆ ತಂದು ಭಾರತೀಯ ಬಹುತ್ವದ ಸಂಸ್ಕೃತಿಗೆ ಹೊಸ ಅರ್ಥ ನೀಡಿದರು. ಇಂದಿನ ಜಗತ್ತಿನಲ್ಲಿ ಧಾರ್ಮಿಕ ಅಸಹಿಷ್ಣುತೆ, ದ್ವೇಷ ಮತ್ತು ಗುರುತಿನ ರಾಜಕೀಯ ಹೆಚ್ಚುತ್ತಿರುವ ಸಂದರ್ಭದಲ್ಲಿ ದಾರಾ ಶಿಕೋಹರ ಸಂದೇಶವು ಇನ್ನಷ್ಟು ಪ್ರಸ್ತುತವಾಗಿದೆ. ಅವರ ಜೀವನವು ಜ್ಞಾನ, ಪ್ರೀತಿ, ಸಹಿಷ್ಣುತೆ ಮತ್ತು ಸಂವಾದವೇ ಶಾಶ್ವತ ಶಾಂತಿಯ ನಿಜವಾದ ಮಾರ್ಗ ಎಂಬುದನ್ನು ಸಾರುತ್ತದೆ. ಆದ್ದರಿಂದ ದಾರಾ ಶಿಕೋಹನನ್ನು ಕೇವಲ ಮೊಘಲ್ ರಾಜಕುಮಾರನಾಗಿ ಮಾತ್ರವಲ್ಲ, ಭಾರತೀಯ ಧರ್ಮಸಾಮರಸ್ಯದ ಮಹಾನ್ ದಾರ್ಶನಿಕ, ಸಾಂಸ್ಕೃತಿಕ ಸೇತುವೆ ನಿರ್ಮಾತೃ ಮತ್ತು ವಿಶ್ವಮಾನವೀಯ ಮೌಲ್ಯಗಳ ಪ್ರತಿಪಾದಕರಾಗಿ ಸ್ಮರಿಸಬೇಕು.

ದಾರಾ ಶಿಕೋಹ ಭಾರತೀಯ ಇತಿಹಾಸದಲ್ಲಿ ಧರ್ಮಗಳ ನಡುವಿನ ಸಂವಾದಕ್ಕೆ ಹೊಸ ದಿಕ್ಕನ್ನು ನೀಡಿದ ಮಹತ್ವದ ವ್ಯಕ್ತಿತ್ವ. ಸೂಫಿ ಪರಂಪರೆ ಮತ್ತು ಭಾರತೀಯ ತತ್ವಶಾಸ್ತ್ರವನ್ನು ಪರಸ್ಪರ ಸಂವಾದಕ್ಕೆ ತಂದ ಅವರ ಪ್ರಯತ್ನವು ವಿಶ್ವ ಇತಿಹಾಸದಲ್ಲಿಯೇ ಅಪರೂಪದ ಉದಾಹರಣೆಯಾಗಿದೆ. ಅವರ ಜೀವನವು ಧರ್ಮಗಳ ನಡುವೆ ವೈಷಮ್ಯವಲ್ಲ, ಪರಸ್ಪರ ಅರ್ಥೈಸಿಕೊಳ್ಳುವ ಮನೋಭಾವವೇ ಶಾಶ್ವತ ಶಾಂತಿಗೆ ದಾರಿ ಎಂಬ ಸಂದೇಶವನ್ನು ನೀಡುತ್ತದೆ. ಈ ಹಿನ್ನೆಲೆಯಲ್ಲಿಯೇ ದಾರಾ ಶಿಕೋಹರ ಜೀವನ ಮತ್ತು ಚಿಂತನೆಗಳನ್ನು ಅಧ್ಯಯನ ಮಾಡುವುದು ಇಂದಿಗೂ ಪ್ರಸ್ತುತವಾಗಿದೆ.

ಪರಾಮರ್ಶನ ಗ್ರಂಥಗಳು:

1. ಅಂಬಳಿಕೆ ಹಿರಿಯಣ್ಣ (ಸಂ.), (2009), ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ತ್ವ , ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.
2. ಫಕೀರ ಮುಹಮ್ಮದ್ ಕಟ್ಪಾಡಿ, (2010), ಸೂಫಿ ಸಂತರು, ಬೆಂಗಳೂರು: ಅಂಕಿತ ಪ್ರಕಾಶನ.
3. ಅಗ್ರಹಾರ ಕೃಷ್ಣಮೂರ್ತಿ, (1994), ದಾರಾ ಶಿಕೋಹ – ಜೀವನ ಮತ್ತು ಚಿಂತನೆ, ಹಳೇಹಟ್ಟಿ: ಸಖೀಗೀತ ಪ್ರಕಾಶನ.